**ಪರಿಹಾರ ಬಾಂಡುಗಳ ಮೇಲೆ ಮಾತ್ರ ಬ್ಯಾಂಕ್ ಸಾಲಗಳು**
**ಡಿಸೆಂಬರ್ 14, 2002**

ಪರಿಹಾರ ಬಾಂಡುಗಳ ಮೇಲೆ ಸಾಲ ಮಂಜೂರು ಮಾಡಲು ಭಾರತೀಯ ರಿಸರ್ವ್ ಬ್ಯಾಂಕ್ ಅನುಮತಿ ನೀಡಿದೆ ಎಂಬುದಾಗಿ ಕೆಲವು ಪತ್ರಿಕೆಗಳಲ್ಲಿ ಇಂದು ವರದಿಯಾಗಿದೆ.

ಭಾರತ ಸರ್ಕಾರದ ಸೂಚನೆಗಳ ಪ್ರಕಾರ, ಪರಿಹಾರ ಬಾಂಡುಗಳ ಮೇಲೆ ಮಾತ್ರ ಸಾಲಗಳನ್ನು ಮಂಜೂರು ಮಾಡಲು ಬ್ಯಾಂಕುಗಳಿಗೆ ಅನುಮತಿ ನೀಡಲಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕು ಸ್ಪಷ್ಟಪಡಿಸಿದೆ. ಈ ಸೌಲಭ್ಯ 2002ರ ಅಕ್ಟೋಬರ್‌ನಲ್ಲಿ ಪ್ರಾರಂಭಿಸಲಾದ ಹೊಸ ಯೋಜನೆ "ಶೇ.7ರ ಉಳಿತಾಯ ಬಾಂಡುಗಳು, 2002"ರ ಮೇಲೆ ಲಭ್ಯವಿಲ್ಲ.

ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು ಮತ್ತು ಬ್ಯಾಂಕಿಂಗ್ ಅಲ್ಲದ ಹಣಕಾಸು ಸಂಸ್ಥೆಗಳು ನೀಡುವ ಸಾಲಕ್ಕೆ, ಈ ವರ್ಷ ಅಕ್ಟೋಬರ್ 1 ರಿಂದ ಪ್ರಾರಂಭಿಸಲಾದ ಶೇ.7ರ ಉಳಿತಾಯ ಬಾಂಡುಗಳು ಪಾರ್ಶ್ವಿಕ ಭದ್ರತೆಗೆ ಅರ್ಹವಲ್ಲ. ಶೇ.8ರ ಪರಿಹಾರ ಬಾಂಡುಗಳು, 2002ರಲ್ಲಿರುವಂತೆ ಶೇ.7ರ ಉಳಿತಾಯ ಬಾಂಡುಗಳಲ್ಲಿ ಹೂಡಲು ಗರಿಷ್ಠ ಮಿತಿ ಇಲ್ಲ. ಆದರೆ ಎರಡೂ ಬಾಂಡುಗಳ ಮೇಲೆ ಗಳಿಸಿದ ಬಡ್ಡಿಗೆ ಆದಾಯ ತೆರಿಗೆ ಮತ್ತು ಸಂಪತ್ತು ತೆರಿಗೆಗಳಿಂದ ವಿನಾಯಿತಿ ಇದೆ.

ಅಲ್ಪನಾ ಕಿಲ್ಲಾವಾಲಾ
ಪ್ರಧಾನ ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2002–03/622